aglasem.com

FOR CBSE CLASS 12 EXAM PREPARATION

CBSE Class 12 2027 Syllabus · Kannada

EXAM	YEAR	TYPE	SUBJECT
CBSE Class 12	2027	Syllabus	Kannada

KANNADA SYLLABUS 2026-27
CODE NO 115
CLASS XII

Table of Content

S.No	CONTENT	PAGE No
1	Rationale	1
2	Aims & Objectives	2
3	Course Structure	3-4
4	Course content	5-8
5	Guidelines for internal assessment (Practical/ Projects etc)	9
6	Prescribed Textbook	10-11

ತಾರ್ಕಿಕ ಹಿನ್ನೆಲೆ

ಯಾವುದೇ ಭಾಷೆ ಸಾಮಾಜಿಕ ಸಂಪರ್ಕವನ್ನು ಸಾಧಿಸುವ ಸಂಪರ್ಕ ಕೊಂಡಿಯಾಗಿದೆ. ಮಾನವ ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಲು ಭಾಷೆ ಮಾಧ್ಯಮವಾಗಿದೆ. ಅದರಲ್ಲೂ ಮಾತೃಭಾಷೆ ಮಾನವ ಬದುಕಿನ ಜೀವತಂತುವಿದ್ದಂತೆ. ಹೀಗಾಗಿ ಮನುಷ್ಯ ಬಾಳಲು-ಬೆಳೆಯಲು ಮಾತೃಭಾಷೆ ಅತ್ಯಂತ ಅಗತ್ಯವಾಗಿದೆ. ಒಬ್ಬ ಮನುಷ್ಯ ತನ್ನ ಜೀವನದಲ್ಲಿ ಎಷ್ಟೇ ಭಾಷೆಗಳನ್ನು ಕಲಿತಿದ್ದರೂ ಕೂಡ ಆತನ ಆಲೋಚನೆಗಳು, ಆಚಾರ-ವಿಚಾರಗಳು ಮನದಲ್ಲಿ ಮೂಲತಃ ರೂಪುಗೊಳ್ಳುವುದು ಮಾತೃಭಾಷೆಯಲ್ಲಿಯೇ. ಹೀಗಾಗಿ ಮಾತೃ ಭಾಷೆ ವ್ಯಕ್ತಿತ್ವದ ಮೂಲ ದ್ರವ್ಯವಾಗಿದೆ. ಅದನ್ನು ಬಿಟ್ಟು ಆತನಿಗೆ ಬದುಕಿಲ್ಲ. ನಿಜವಾಗಿ ಹೇಳಬೇಕೆಂದರೆ ವ್ಯಕ್ತಿಯ ಮಾತೃಭಾಷೆಯ ಶಕ್ತಿಯ ಮೇಲೆ ಆತನ ವ್ಯಕ್ತಿತ್ವದ ಸಾಮರ್ಥ್ಯವೂ ನಿರ್ಮಾಣವಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಏಕೆ ಮಾತೃಭಾಷೆಯಲ್ಲಿಯೇ ಬೋಧನೆ ನಡೆಯಬೇಕೆಂಬುದನ್ನು ಹೀಗೆ ವಿವರಿಸಬಹುದು.

ಒಬ್ಬ ಮನುಷ್ಯ ಏನನ್ನೇ ಆಗಲಿ ಯೋಚಿಸುವುದು-ಹೇಳುವುದು ತನ್ನ ಮಾತೃಭಾಷೆಯಲ್ಲಿ. ಆತ ತನ್ನ ಬದುಕಿನ ಅಗತ್ಯತೆಗಳನ್ನು ಪೂರೈಸಿಕೊಳ್ಳುವುದು ಮಾತೃಭಾಷೆಯಲ್ಲಿ. ತನ್ನ ಸುತ್ತಮುತ್ತಲ ಜನರ ಜೊತೆ-ಸಮಾಜದ ಜೊತೆ ಸಂಪರ್ಕಿಸುವುದು ಮಾತೃ ಬಾಷೆಯಲ್ಲಿಯೇ. ಹೀಗಾಗಿ ಆತನ ಜೀವ-ಜೀವನ ಪುಷ್ಠಿಗೊಳ್ಳುವುದು ಮಾತೃಭಾಷೆಯಲ್ಲಿಯೇ. ಹೀಗಿರುವಾಗ ತನ್ನ ಮಾತೃಭಾಷೆಯನ್ನು ಬಿಟ್ಟು ಬೇರೆ ಯಾವ ಭಾಷೆಯಲ್ಲೂ ಆತ ಸಮರ್ಥವಾಗಿ ಏನೂ ಮಾಡಲಾರ.

ತನ್ನ ಬದುಕನ್ನು ರೂಪಿಸುವ ಭಾಷೆಯಲ್ಲಿಯೇ ವಿದ್ಯಾರ್ಥಿಗೆ ಶಿಕ್ಷಣ ದೊರಕಿದರೆ ಆತ ತನ್ನನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಿಕೊಂಡು ಪೂರಣ ವ್ಯಕ್ತಿತ್ವ ಬೆಳೆಸಿಕೊಳ್ಳಬಲ್ಲ. ತನಗೆ ಅನುಗುಣವಾದ ಆಸೆ-ಆಕಾಂಕ್ಷೆಗಳಂತೆ ಬದುಕಬಲ್ಲ. ಆತನ ಬದುಕನ್ನು ಭಾಷೆಯ ತೊಡಕಿನಿಂದಲೇ ನಾವು ಕಟ್ಟಿಹಾಕಿಬಿಟ್ಟರೆ ಆತನ ಬೆಳೆಯುವ ಸ್ವಾತಂತ್ರ್ಯವನ್ನೇ ಸಮಾಜ ಕಸಿದುಕೊಂಡಂತಾಗುತ್ತದೆ. ಮನುಷ್ಯನ ಸರ್ವಾಂಗೀಣ ಬೆಳವಣಿಗೆ ಆಗಬೇಕೆಂದರೆ ಆತನಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಅತಿ ಅಗತ್ಯವಾಗಿ ಬೇಕು.

ಮಾತೃಭಾಷೆ ಮತ್ತು ಮಾತೃಭಾಷಾ ಸಾಹಿತ್ಯ ಎಲ್ಲರಿಗೂ ಅತ್ಯಂತ ಪ್ರಿಯವಾಗಿರುತ್ತದೆ. ಕಾರಣವೆಂದರೆ ಅದನ್ನು ಅರ್ಥೈಸಿಕೊಳ್ಳಲು ಕಷ್ಟಪಡಬೇಕಾಗಿಲ್ಲ. ಮಾತೃಭಾಷೆಯಲ್ಲಿ ವ್ಯಕ್ತಿ ಎಲ್ಲವನ್ನೂ ಆರ್ಥೈಸೊಕೊಳ್ಳಬಲ್ಲ-ಆನಂದಿಸಬಲ್ಲ-ಬದುಕಬಲ್ಲ ಮತ್ತು ಬೆಳೆಯಬಲ್ಲ. ಆನಂದದ ಓದು-ಇಷ್ಟಪಟ್ಟು ಓದುವ ಓದು ಮನುಷ್ಯನನ್ನು ಇನ್ನಿಲ್ಲದ ಎತ್ತರಕ್ಕೆ ಏರಿಸುತ್ತದೆ, ವ್ಯಕ್ತಿತ್ವದ ವಿಕಸನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅದರಿಂದ ಉತ್ತಮ ಸಮಾಜದ ನಿರ್ಮಾಣವೂ ಆಗುತ್ತದೆ.

ಹಿಂದೆಂದಿಗಿಂತಲೂ ಇಂದು ಮಾತೃಭಾಷೆಯಲ್ಲಿಯ ಓಧು ಹೆಚ್ಚು ಅಗತ್ಯವಾಗಿದೆ. ಪರಭಾಷೆಗಳ ದಾಳಿಗೆ, ವ್ಯಾಮೋಹಕ್ಕೆ ಯುವಜನತೆ ಒಳಗಾಗುತ್ತಿದೆ. ಅವರಿಗೆ ಇತ್ತ ಮಾತೃಭಾಷೆಯ ಮೇಲೂ ಸರಿಯಾದ ಹಿಡಿತವಿಲ್ಲ, ಅತ್ತ ಪರಭಾಷೆ ಕೂಡ ಅರ್ಥವಾಗುತ್ತಿಲ್ಲ. ಹೀಗಾಗಿ ಯಾವ ಭಾಷೆಯಲ್ಲೂ ಭಾವನೆಗಳ ಅಭಿವ್ಯಕ್ತಿ ಸಾಧ್ಯವಾಗದೆ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಯಲ್ಲಿದ್ದಾರೆ. ಇದು ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿ. ಅಭಿವ್ಯಕ್ತಿ ಮಾಧ್ಯಮ ಸರಿಯಾಗಿರದಿದ್ದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತದೆ. ಅಲ್ಲದೇ ವಿದ್ಯಾರ್ಥಿಗಳನ್ನು ಸಂಸ್ಕೃತಿಹೀನತೆಯತ್ತ ಕೊಂಡೊಯ್ಯುವ ಅಪಾಯವೂ ಇದೆ. ಇದನ್ನೆಲ್ಲ ತಡೆಗಟ್ಟಲು ಇರುವ ಪರಿಹಾರವೇ ಮಾತೃಭಾಷೆಯಲ್ಲಿ ನೀಡುವ ಶಿಕ್ಷಣ. ವ್ಯಕ್ತಿ ತನ್ನ ನೆಲ-ಜಲ-ಸಂಸ್ಕೃತಿಗಳಿಗೆ ಅನುಗುಣವಾಗಿ ಬಾಳುತ್ತ, ಸಾಹಿತ್ಯದಿಂದ ಸ್ಫೂರ್ತಿ ಪಡೆಯುತ್ತ ಸಂಪೂರ್ಣ ವ್ಯಕ್ತಿತ್ವ ವಿಕಾಸ ಹೊಂದಲು, ಉತ್ತಮ ರಾಷ್ಟ್ರ ನಿರ್ಮಾಪಕನಾಗುವಲ್ಲಿ ಮಾತೃಭಾಷಾ ಬೋಧನೆಯ ಪಾತ್ರ ಅತ್ಯಂತ ಮಹತ್ವಪೂರ್ಣವಾದುದಾಗಿದೆ.

ಗುರಿಗಳು ಮತ್ತು ಉದ್ದೇಶಗಳು

ಭಾಷೆ ಎನ್ನುವುದು ಮಾನವ ವಿಕಾಸದ ಮೂಲಮಂತ್ರ. ಅದಿಲ್ಲದಿದ್ದರೆ ಮಾನವ ತನ್ನ ಅನಿಸಿಕೆಗಳನ್ನು ಸಮರ್ಥವಾಗಿ ವ್ಯಕ್ತಪಡಿಸಲಾರ. ಏಕೆಂದರೆ ಭಾಷೆ ಮೂಲತಃ ಅಭಿವ್ಯಕ್ತಿ ಮಾಧ್ಯಮ. ಆ ಹಿನ್ನೆಲೆಯಲ್ಲಿ ವ್ಯಕ್ತಿಯ ಬೆಳವಣಿಗೆಗೆ ಅನುಗುಣವಾಗಿ ಭಾಷೆಯ ಅಗತ್ಯತೆ ಮತ್ತು ಮಹತ್ವಗಳೂ ಕೂಡ ವಿಭಿನ್ನವಾಗಿರುತ್ತವೆ. ಅವನ್ನು ಈ ಕೆಳಗಿನಂತೆ ವಿವರಿಸಬಹುದು.

1.ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲಿ ವ್ಯಕ್ತಿಯ ಅನಿಸಿಕೆಗಳನ್ನು ಮಾತ್ರ ಇನ್ನೊಬ್ಬರಿಗೆ ಅರ್ಥವಾಗುವಂತೆ ಸಮರ್ಥವಾಗಿ ವ್ಯಕ್ತಪಡಿಸುವುದು ಮೂಲ ಉದ್ದೇಶವಾಗಿರುತ್ತದೆ. ಆದರೆ ಪದವಿಪೂರ್ವ ಹಂತ ಇದನ್ನು ಮೀರಿದ ಹಂತವಾಗಿದೆ. ವ್ಯಕ್ತಿ ತನ್ನ ಆಸೆ-ಆಕಾಂಕ್ಷೆಗಳು, ಬದುಕಿನ ಗೊತ್ತು-ಗುರಿಗಳನ್ನು ಕಂಡುಕೊಳ್ಳುವ ಹಂತ ಇದಾಗಿದೆ. ಹೀಗಾಗಿ ಇದನ್ನು ವ್ಯಕ್ತಿತ್ವ ವಿಕಸನದ ಹಂತ ಎಂದು ಕರೆಯಬಹುದು. ಈ ಹಂತದಲ್ಲಿ ವ್ಯಕ್ತಿ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಬದುಕನ್ನು ರೂಪಿಸಿಕೊಳ್ಳಲು ಹೊರಟಿರುತ್ತಾನೆ. ಇದು ಒಂದರ್ಥದಲ್ಲಿ ಕನಸುಗಳ ಕಾಲವೂ ಹೌದು. ಅಂತಹ ಸಂದರ್ಭದಲ್ಲಿ ಈ ಹಾರುವ ಹಕ್ಕಿಗೆ ಭಾಷೆ ರೆಕ್ಕೆಪುಕ್ಕಗಳನ್ನು ಕಟ್ಟಿಕೊಡುತ್ತದೆ. ಅದಕ್ಕೆ ಆತನ ಮಾತೃಭಾಷೆ ಶಕ್ತಿ ಸಾಮರ್ಥ್ಯಗಳನ್ನು ಒದಗಿಸಿಕೊಡುತ್ತದೆ.

2.ಪದವಿಪೂರ್ವ ಕಲಿಕೆಯ ಹಂತದಲ್ಲಿ ವಿದ್ಯಾರ್ಥಿ ಭಾಷಾ ಕಲಿಕೆಯ ಮೂಲ ಹಂತವನ್ನು ದಾಟಿ ಸಾಹಿತ್ಯ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವ ಹಂತಕ್ಕೆ ತಲುಪಿರುತ್ತಾನೆ. ವೇಗವಾಗಿ ಬೆಳೆಯುತ್ತಿರುವ ಆತನ ದೈಹಿಕ ವಿಕಾಸದ ಜೊತೆಗೆ ಮಾನಸಿಕ ಬೆಳವಣಿಗೆ ಮತ್ತು ವಿಕಾಸಕ್ಕೆ ಅಗತ್ಯವಾದ ವೈಚಾರಿಕತೆಯನ್ನು ಸಾಹಿತ್ಯ ಮತ್ತು ಭಾಷೆ ಒದಗಿಸಿಕೊಡುತ್ತದೆ. ಯೋಚನೆಗಳು ಸರಿಯಾದ ದಾರಿಯಲ್ಲಿ ಮುನ್ನಡೆದಾಗ ಮಾತ್ರ ಮಾತಿನ ಸಮರ್ಥ ಅಭಿವ್ಯಕ್ತಿ ಸಾಧ್ಯವಾಗುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿ ಓದುವ ಭಾಷೆ ಮತ್ತು ಸಾಹಿತ್ಯ ಪ್ರೌಢ ಶಿಕ್ಷಣಕ್ಕಿಂತ ಉನ್ನತ ಮಟ್ಟದ್ದಾಗಿರುವುದರಿಂದ ಈ ಹಂತದ ಓದು ವ್ಯಕ್ತಿತ್ವ ನಿರ್ಮಾಣದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಮತ್ತು ವಿದ್ಯಾರ್ಥಿಯನ್ನು, ಯುವ ಜನಾಂಗವನ್ನು ಮುನ್ನಡೆಸಲು ಇದೇ ಸರಿಯಾದ ಕಾಲವಾಗಿರುವುದರಿಂದ ಸಾಹಿತ್ಯ ಅಥವಾ ಮಾತೃ ಭಾಷೆಯಲ್ಲಿನ ಓದು ಅವರನ್ನು ಸರಿಯಾದ ದಿಕ್ಕಿನಲ್ಲಿ ಕರೆದೊಯ್ಯಲು ದಾರಿ ತೋರಿಸುತ್ತದೆ.

3.ಮಾತೃಭಾಷೆಯ ಸಾಹಿತ್ಯದ ಓದು ವ್ಯಕ್ತಿಯನ್ನು ತಳಮಟ್ಟದಿಂದ ಮೇಲಕ್ಕೆತ್ತುತ್ತದೆ. ಒಬ್ಬ ವ್ಯಕ್ತಿ ಯಾವುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬಲ್ಲನೋ ಆತ ಮುಂದೆ ಯಾವುದರ ಬಗೆಗಾದರೂ ಸರಿಯಾಗಿ ಯೋಚಿಸಬಲ್ಲ ಮತ್ತು ಒಂದು ವಿಷಯದ ಬಗ್ಗೆ ಸರಿಯಾದ ನಿರ್ಧಾರವನ್ನೂ ಕೈಗೊಳ್ಳಬಲ್ಲ. ಸ್ವಂತ ವಿಚಾರ, ಸ್ವತಂತ್ರ ಆಲೋಚನಾ ಶಕ್ತಿ ಮತ್ತು ದಿಟ್ಟ ನಿರ್ಧಾರಗಳಿಗೆ ಈ ಹಂತದ ಸಾಹಿತ್ಯದ ಓದು ಸಹಾಯಕವಾಗುತ್ತದೆ. ವ್ಯಕ್ತಿಯ ಗಟ್ಟಿತನ ಮತ್ತು ದಿಟ್ಟತನಗಳ ಬದುಕಿಗೆ ಪದವಿಪೂರ್ವ ಸಾಹಿತ್ಯದ ಓದು ಸಾಕಷ್ಟು ನೆರವಾಗುವುದಲ್ಲದೇ ದೇಶದ ಉತ್ತಮ ಪ್ರಜೆಯೂ, ಆಸ್ತಿಯೂ ಆಗಿ ಬೆಳೆಯುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

4.ಪರಭಾಷಾ ವ್ಯಾಮೋಹ ಮತ್ತು ವಿದೇಶೀ ಸಂಸ್ಕೃತಿಯ ವ್ಯಾಮೋಹಕ್ಕೆ ಒಳಗಾಗುತ್ತಿರುವ ಇಂದಿನ ಯುವ ಜನತೆಗೆ ಮಾತೃಭಾಷೆ ಮತ್ತು ಸಾಹಿತ್ಯದ ಮೂಲಕ ಸರಿಯಾದ ಮಾರ್ಗದರ್ಶನವನ್ನು ಮಾಡುವುದು ಸರಕಾರದ, ಸಮಾಜದ ಜವಾಬ್ದಾರಿಯೂ ಆಗಿದೆ. ಸಾಹಿತ್ಯದ ಓದು ಉತ್ತಮ ಸಂಸ್ಕಾರಗಳನ್ನು ಕೊಡುವುದರಿಂದ ಉತ್ತಮ ಸಂಸ್ಕಾರಯುತ ಸಮಾಜ ನಿರ್ಮಾಣಕ್ಕಾಗಿ ಪದವಿಪೂರ್ವ ಹಂತದಲ್ಲಿ ಮಾತೃ ಭಾಷೆಯಲ್ಲಿ ಸಾಹಿತ್ಯ ಬೋಧನೆ ಮಾಡುವುದರಿಂದ ಸದೃಢ ರಾಷ್ಟ್ರ ನಿರ್ಮಾಣವೂ ಸಾಧ್ಯವಾಗುತ್ತದೆ.

KANNADA CODE NO. 115
CLASS XII
2026 -2027

COURSE STRUCTURE

S.No	TOPIC
	POETRY
1	Vachanagalu.(Basavanna mattuUrilinga peddiya vachanagalu)
2	Innunhuttade irali naariyarennavolu.
3	Pageyam baalakanembare?
4	Jaaliya maradamte.
5	Habbale avara rasaballi.
6	Shilube eriddaane.
7	Omdu hoo hechchige iduttini.
8	Omme nagutteve.
	PROSE
1	Aaykeyide namma kaiyalli.
2	Kannadavannu kattuva kelasa.
3	Dhanigala belli lota.
4	Badukannu preetisida santa.
5	Tirulgannadada belnudi.
	DEERGHA GADYA
1	**Krishnegowdana aane** – By : **K. P. POORNACHANDRA TEJASWI**
	Creative writing A. Essay B. Letter to Editor/Official letter
	Grammar Unseen Comprehension Seen Comprehension (S.C)
	A brief outline History of Kannada Literature consisting of major poets and poetesses included in the prescribed textbook. 1. Basavanna 2. Kumaravyasa

	3. Purandara Dasa 4. D.R Bendre 5. K.S Nisar Ahmad 6. Ha Ma Nayak 7. Muddana 8. Puligere Somnatha

GRAMMAR CONTENT

MCQ

1. Vibhakti Pratyaya
2. Opposite words
3. Meaning of words
4. Different meanings
5. Granthika roopa
6. Pada vichchedana
7. Sandhi
8. Samaasa
9. Tatsama Tadbhava
10. Dhatu
11. Roopa Nishpatti
12. Translation of the given sentence from English to Kannada
13. Changing Tenses

WRITING

1. Kartai Karmani
2. Transformation of Sentences in to questions
3. Transformation of Sentences in to Negation
4. Converting Compound to Simple sentences and vice-versa
5. Proverbs
6. Prosody

Metre :

(a) Champakamala

KANNADA CODE NO. 115
CLASS XII
2026-2027

Course content

Sl no	Prose / Poetry	Content Course		
		Specific Learning objects	Teaching Learning Process	Learning Outcomes
	ಪದ್ಯಗಳು			
1	ವಚನಗಳು	ನಡುಗನ್ನಡ ಸಾಹಿತ್ಯ ವಿಶೇಷತೆ ಕನ್ನಡ ಸಾಹಿತ್ಯದಲ್ಲಿ ಬಸವಣ್ಣ ಮತ್ತು ಉರಿಲಿಂಗಪೆದ್ದಿಯರ ಸ್ಥಾನಮಾನ ಬಸವಣ್ಣನವರ ವಚನಗಳ ವಿಶೇಷತೆ ಉರಿಲಿಂಗಪೆದ್ದಿಯ ವಚನಗಳ ಮೌಲ್ಯ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ನಿದರ್ಶನ ಪದ್ಧತಿ	1.ಬಸವಣ್ಣನವರ ವಚನಗಳ ವಿಶೇಷತೆಯನ್ನು ಅರಿತುಕೊಳ್ಳುವರು. 2.ಉರಿಲಿಂಗಪೆದ್ದಿಯ ವಚನಗಳ ಮೌಲ್ಯಗಳನ್ನು ಅರಿಯುವರು. 3.ಏಕಾಗ್ರತೆಯನ್ನು ಬೆಳೆಸಿಕೊಳ್ಳುವರು
2	ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು	ನಡುಗನ್ನಡ ಸಾಹಿತ್ಯ ವಿಶೇಷತ ಕನ್ನಡ ಸಾಹಿತ್ಯದಲ್ಲಿ ಕುಮಾರವ್ಯಾಸನ ಸ್ಥಾನಮಾನ ದ್ರೌಪದಿಯ ಸಂಕಟ ಮತ್ತು ಅದನ್ನು ಭೀಮನ ಬಳಿ ನಿವೇದಿಸಿಕೊಂಡ ಬಗೆ ಭೀಮನು ದ್ರೌಪದಿಯನ್ನು ಸಂತೈಸಿದ ಬಗೆ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ ನಿದರ್ಶನ ಪದ್ಧತಿ	1.ತಮ್ಮ ನೋವು ನಲಿವುಗಳನ್ನು ಅತ್ಮೀಯರ ಜೊತೆ ಹಂಚಿಕೊಳ್ಳುವ ಗುಣ – ಸ್ವಭಾವ ಬೆಳೆಸಿಕೊಳ್ಳುವರು. 2.ಇಂದಿನ ಕಾಲದಲ್ಲಿ ಸಹ ಹೆಣ್ಣು ಅನುಭವಿಸುವ ನೋವುಗಳನ್ನು ವಿವರಿಸುವರು.
3	ಪಗೆಯಂ ಬಾಲಕನೆಂಬರೇ	ಶತಕ ಸಾಹಿತ್ಯ ವಿಶೇಷತೆ. ಕನ್ನಡ ಸಾಹಿತ್ಯದಲ್ಲಿ ಪುಲಿಗೆರೆ ಸೋಮನಾಥನ ಸ್ಥಾನಮಾನ. ಸೋಮನಾಥನ ಶತಕ ನೀತಿಯ ಹಂದರವಾಗಿ ರೂಪುಗೊಂಡಿರುವ ಬಗೆ. ಭಕ್ತಿ ಜ್ಞಾನ ವೈರಾಗ್ಯ ನೀತಿಗಳನ್ನು ಪ್ರತಿಪಾದಿಸುವ ಇಲ್ಲಿನ ಪದ್ಯಗಳು	ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ ನಿದರ್ಶನ ಪದ್ಧತಿ	1.ಜ್ಞಾನ ಸಂಪಾದನೆಯ ವಿವಿಧ ಮಾರ್ಗಗಳನ್ನು ತಿಳಿಯುವರು. 2.ಮಕ್ಕಳು, ದೊಡ್ಡವರಾದ ಮೇಲೆ ತಮ್ಮ ಪಾಲಕರನ್ನು ನೋಡಿಕೊಳ್ಳುವುದು ಕರ್ತವ್ಯವೆಂಬುದನ್ನು ಅರಿತುಕೊಳ್ಳುವರು. 3.ಮಹತ್ವಪೂರ್ಣ ವಿಷಯಗಳನ್ನು ಅಲಕ್ಷ್ಯಸಬಾರದು. 4.ಮಾನಸಿಕ ಶುದ್ಧಿ ಮುಖ್ಯ ಎಂಬುದನ್ನು ಕಲಿಯುವರು.
4	ಜಾಲಿಯ ಮರದಂತೆ	ದಾಸ ಸಾಹಿತ್ಯ ವಿಶೇಷತೆ ಈ ಕೀರ್ತನೆಯ ವಿಶೇಷತೆ ದುರ್ಜನ ಮತ್ತು ಜಾಲಿಯ ಮರ ಎರಡನ್ನೂ ಸಮೀಕರಿಸಿರುವ ಬಗೆ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ನಿದರ್ಶನ ಪದ್ಧತಿ	1.ದುಷ್ಟರಿಂದ ದೂರವಿರಬೇಕೆಂಬ ಮಾತನ್ನು ಜೀವನದಲ್ಲಿ ಅಳವಡಿಸಿಕೊಳ್ಳುವರು. 2.ಸಜ್ಜನರ ಸಹವಾಸ ಮಾಡುವರು. 3.ಶಾಸ್ತ್ರೀಯ ಸಂಗೀತದ ಬಗೆಗೆ ಒಲವು ಬೆಳೆಸಿಕೊಳ್ಳುವರು.
5	ಹಬ್ಬಲಿ ಅವರ ರಸಬಳ್ಳಿ	ಜನಪದ ಸಾಹಿತ್ಯದಲ್ಲಿ ಗರತಿಯ ಹಾಡು ಕೃತಿಗಿರುವ ವಿಶೇಷತೆ. ಜನಪದ ಸಾಹಿತ್ಯದಲ್ಲಿ ತ್ರಿಪದಿಗಳ ವಿಶೇಷತೆ. ತಾಯಿ, ತಂದೆ , ತವರಿನ ಸಿರಿಯ	ಕಥೆ ಹೇಳುವಿಕೆ	1.ತಾಯಿ, ತಂದೆ , ತವರಿನ ಸಿರಿಯ ಬಗೆಗಿನ ಜನಪದರ ಭಾವನೆಗಳನ್ನು ಗೌರವಿಸುವರು. 2.ಜನಪದರು ಮಕ್ಕಳನ್ನು ಬೆಳೆಸಿದ ರೀತಿಗಳ ಬಗ್ಗೆ

		ಬಗೆಗಿನ ಜನಪದರ ಭಾವನೆಗಳು ಜನಪದರು ಮಕ್ಕಳನ್ನು ಬೆಳೆಸಿದ ರೀತಿ.		ಮೆಚ್ಚುಗೆ ವ್ಯಕ್ತಪಡಿಸುವರು.
6	ಶಿಲುಬೆ ಏರಿದ್ದಾನೆ	ಕವಿ ಕೆ.ಎಸ್. ನಿಸಾರ್ ಅಹಮದ್ ಅವರ ಸಾಹಿತ್ಯ ವಿಶೇಷತೆ ಲೋಕಕಲ್ಯಾಣಕ್ಕಾಗಿ ಮಿಡಿದ ಜೀಸಸ್ ನ ವ್ಯಕ್ತಿತ್ವ ಕ್ರೌರ್ಯ ಇಂದಿಗೂ ಸಹ ಭೀಕರವಾಗಿ ಹಬ್ಬಿರುವ ಬಗೆ ಶಿಲುಬೆಯೇರಿರುವ ಜೀಸಸ್ ಮನುಕುಲಕ್ಕೆ ನೀಡಿರುವ ಸಂದೇಶ	ಚರ್ಚಾ ಪದ್ಧತಿ ಕಥೆ ಹೇಳುವಿಕೆ	1.ಜೀಸಸ್ ಮನುಕುಲಕ್ಕೆ ನೀಡಿರುವ ಸಂದೇಶಗಳನ್ನು ಅಳವಡಿಸಿಕೊಳ್ಳುವರು.
7	ಒಂದು ಹೂ ಹೆಚ್ಚಿಗೆ ಇಡುತೀನಿ	ಮುದುಕಿ ಮತ್ತು ಮುದುಕನ ತವಕ, ಕಳಕಳಿ ತಲ್ಲಣಗಳು ಕವಿತೆಯಲ್ಲಿ ಚಿತ್ರಿತವಾಗಿರುವ ಬಗೆ, ಮಗ, ಸೊಸೆ, ಮೊಮ್ಮಗಳ ತಾತ್ಸಾರ ಕವಿತೆಯಾಲ್ಲಿ ವ್ಯಕ್ತವಾಗಿರುವ ಬಗೆ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ನಿದರ್ಶನ ಪದ್ಧತಿ	1.ಮುದುಕಿ ಮತ್ತು ಮುದುಕನ ತವಕ, ಕಳಕಳಿ ತಲ್ಲಣಗಳನ್ನು ತಾವು ಕಂಡು ಕೇಳಿರುವ ಇಂತಹ ಸಂಗತಿಗಳನ್ನು ಹೋಲಿಸುವರು. 2.ಕವಿತೆಯಲ್ಲಿ ಚಿತ್ರಿತವಾಗಿರುವ ಮಗ, ಸೊಸೆ, ಮೊಮ್ಮಗಳ ತಾತ್ಸಾರ ಕವಿತೆಯಲ್ಲಿ ವ್ಯಕ್ತವಾಗಿರುವ ಬಗೆಯನ್ನು ಚರ್ಚಿಸುವರು
8	ಒಮ್ಮೆ ನಗುತ್ತೇವೆ	ಪ್ರೊ. ಬಿ.ಸುಕನ್ಯಾ ಮಾರುತಿ ಅವರ ವಿಚಾರಗಳು ಸಮೃದ್ಧತೆಯ ಬದುಕಿಗಾಗಿ ಸಮಾಜದಲ್ಲಿ ನಡೆಯುತ್ತಿರುವ ನಿರಂತರ ಹೋರಾಟ ತಿನ್ನಲೂ ತುತ್ತನ್ನವೂ ಸಿಗದ ಜನಸಮುದಾಯದಲ್ಲಿ ನಗು ಮರೀಚಿಕೆ. ಕಷ್ಟಗಳನ್ನು ದೂರಮಾಡಿ ಶಾಂತಿಯರಮನೆಯಲ್ಲಿ ಸಂತೃಪ್ತಿ ನಗೆಯ ಜೀವನವನ್ನು ದಲಿತರಿಗಾಗಿ ಕಲ್ಪಿಸಿಕೊಡುವ ತವಕ ಕವಯಿತ್ರಿಗೆ.	ಚರ್ಚಾ ಪದ್ಧತಿ ಕಥೆ ಹೇಳುವಿಕೆ ನಿದರ್ಶನ ಪದ್ಧತಿ	1.ಶೋಷಿತರ ಪರವಾಗಿ ಹೋರಾಡುವ ಮನೋಭಾವ ಬೆಳೆಸಿಕೊಳ್ಳುವರು. 2.ನೋವಿಗೆ ಮನಮಿಡಿಯುವ ಮನೋಭಾವ ಬೆಳೆಸಿಕೊಳ್ಳುವರು
	ಗದ್ಯಗಳು			
1	ಆಯ್ಕೆಯಿದೆ ನಮ್ಮ ಕೈಯಲ್ಲಿ	ಜೀವನದಲ್ಲಿ ಹೊಸ ಹೊಸ ಭರವಸೆಗಳನ್ನು ತುಂಬುವ ಲೇಖಕಿ ನೇಮಿಚಂದ್ರ ಅವರ ವಿಚಾರಗಳು ಬದುಕನ್ನು ಎದುರಿಸಿ ಗೆಲ್ಲುವ ಹಲವು ಆಯ್ಕೆಗಳನ್ನು ಬದುಕು ನಮಗೆ ಕೊಟ್ಟಿದೆ. ಬದುಕಿನಲ್ಲಿ ಸಾಧಿಸುವ ತಾಳ್ಮೆ, ಸಹನೆಗಳ ಅಗತ್ಯವನ್ನು ಪ್ರತಿಪಾದಿಸುವ ಅನುಭವ ಕಥನವೇ ಆಯ್ಕೆಯಿದೆ ನಮ್ಮ ಕೈಯಲ್ಲಿ ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ನಿರೂಪಿಸಿರುವ ಬಗೆ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ ನಿದರ್ಶನ ಪದ್ಧತಿ ರಸಪ್ರಶ್ನೆ	1.ಜೀವನದಲ್ಲಿ ಹೊಸ ಹೊಸ ಭರವಸೆಗಳನ್ನು ಇಟ್ಟುಕೊಳ್ಳುವರು. 2.ಬದುಕನ್ನು ಎದುರಿಸಿ ಗೆಲ್ಲುವ ಛಲ ಬೆಳೆಸಿಕೊಳ್ಳುವರು. 3.ಬದುಕಿನಲ್ಲಿ ಸಾಧಿಸುವ ತಾಳ್ಮೆ, ಸಹನೆಗಳ ಅಗತ್ಯವನ್ನು ಅರಿಯುವರು. 4.ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ತಿಳಿದುಕೊಳ್ಳುವರು
2	ಕನ್ನಡವನ್ನು ಕಟ್ಟುವ ಕೆಲಸ	ಕನ್ನಡ ಸಾಹಿತ್ಯದಲ್ಲಿ ಹಾ.ಮಾ. ನಾಯಕರ ವಿಶೇಷತೆ ಕನ್ನಡ ನಾಡು ನುಡಿಗಳನ್ನು ಕಟ್ಟುವ ಕೆಲಸದ ಅನಿವಾರ್ಯತೆ	ಚರ್ಚಾ ಪದ್ಧತಿ ಉಪನ್ಯಾಸ ಪದ್ಧತಿ ನಿದರ್ಶನ ಪದ್ಧತಿ	1.ಕನ್ನಡದ ಬಗ್ಗೆ ಅಭಿಮಾನ ಬೇಳೆಸಿಕೊಳ್ಳುವರು. 2.ಕನ್ನಡ ನಾಡು ನುಡಿಗಳನ್ನು ಕಟ್ಟುವ ಕೆಲಸದ

		ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ದಬ್ಬಾಳಿಕೆ ಕರ್ನಾಟಕದಲ್ಲಿ ಕನ್ನಡಿಗರೆ ಪರಕೀಯರಾಗುವ ಅಪಾಯ ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಕಾರಣಗಳು		ಅನಿವಾರ್ಯತೆ ಅರಿತು ಕನ್ನಡಕ್ಕಾಗಿ ದುಡಿಯು ಗುಣ ಬೆಳೆಸಿಕೊಳ್ಳುವರು. 3.ಕನ್ನಡದ ಶ್ರೇಷ್ಠತೆನ್ನು ತಿಳಿಯುವರು. 4.ಕನ್ನಡ ಕಟ್ಟಲು ಹೊಸ ವಿಧಾನ ಅಳವಡಿಸಿಕೊಳ್ಳುವರು.
3	ಧಣಿಗಳ ಬೆಳ್ಳಿಲೋಟ	ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಲೇಖಕಿ ಡಾ. ಎಚ್ ನಾಗವೇಣಿಯವರ ವಿಶೇಷತೆ ಶಾಂಭವಿ ಹೊಳೆ ಗದ್ಯದಲ್ಲಿ ಒಂದು ಪಾತ್ರವಾಗಿ ಬಂದಿರುವ ಬಗೆ ಧಣಿ ಹಾಗೂ ಹೊಳೆಯ ನಡುವಿನ ಸಮರ. ಚಿನ್ನಮ್ಮ ಮತ್ತು ಆಕೆಯ ಕುಟುಂಬಕ್ಕೆ ಹೊಳೆಯ ಬಗ್ಗೆ ಅಸಹನೆ, ಕೋಪ ಉಂಟಾಗಲು ಕಾರಣ.	ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ	1.ಎಲ್ಲರನ್ನು ಗೌರವಪೂರ್ವಕ ನೋಡುವ ಗುಣ ಬೆಳೆಸಿಕೊಳ್ಳುವರು. 2.ಕಥೆಗಳನ್ನು ಓದು ಹವ್ಯಾಸ ಬೆಳೆಸಿಕೊಳ್ಳುವರು. 3.ವಾಚನ ಕಲೆ ಬೆಳೆಸಿಕೊಳ್ಳುವರು.
4	ಬದುಕನ್ನು ಪ್ರೀತಿಸಿದ ಸಂತ	ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರದಲ್ಲಿ ಜೀವನಚರಿತ್ರೆಯ ವಿಶೇಷತೆ ಕಲಾಂರವರ ಬದುಕಿನ ರಸನಿಮಿಷಗಳು ವ್ಯಕ್ತಿ ಮತ್ತು ರಾಷ್ಟ್ರಗಳ ಬಗೆಗಿನ ಕಲಾಂರವರ ವಿಚಾರಗಳು ಭೇಟಿಯಾದ ಮಕ್ಕಳಿಗೆ ಕಲಾಂ ಹೇಳಿದ ವಿಚಾರಗಳು ಕಲಾಂ ಅವರು ಯಾವಾಗಲು ಸಾಧ್ಯತೆಯನ್ನು ಅರಸುವ ಆಶಾಜೀವಿ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ	1.ಡಾ.ಕಲಾಂ ಅವರ ಜೀವನದ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವರು. 2.ಅಶಾವಾದಿಗಳಾಗುವರು. 3.ಸಾಧನೆಯ ಮಾರ್ಗಗಳನ್ನು ಕಂಡುಕೊಳ್ಳುವರು. 4.ಮಾನವೀಯ ಮೌಲ್ಯಗಳನ್ನು ಗುರುತಿಸಿ, ಮೆಚ್ಚಿ ಹೇಳುವುದು.
5	ತಿರುಳ್ಗನ್ನಡದ ಬೆಳ್ನುಡಿ	ಹೊಸಗನ್ನಡ ಸಾಹಿತ್ಯದ ಅರುಣೋದಯದ ಮುಂಗೋಳಿ ಮುದ್ದಣನ ವಿಶೇಷತೆ ಮುದ್ದಣನನ್ನು ಮನೋರಮೆ ಉಪಚರಿಸಿದ ಬಗೆ ಕಾವ್ಯದ ರೂಪ, ರಸ, ಶೈಲಿಗಳ ಬಗ್ಗೆ ಮುದ್ದಣ ಮನೋರಮೆಯರ ನಡುವೆ ನಡೆದ ಸಂವಾದ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಬಗೆಗೆ ನಡೆದ ಸಂವಾದ ತಿರುಳ್ಗನ್ನಡದ ಸವಿಯ ಬಗೆಗಿನ ಅಭಿಪ್ರಾಯಗಳು ವ್ಯಕ್ತವಾಗಿರುವ ಬಗೆ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ ನಿದರ್ಶನ ಪದ್ಧತಿ ರಸಪ್ರಶ್ನೆ	1.ನಿರರ್ಗಳವಾಗಿ ಮಾತನಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳುವರು. 3.ಅತಿಥಿ ಸತ್ಕಾರ ಮಾಡುವ ಗುಣ ಬೆಳೆಸಿಕೊಳ್ಳವರು. ಕನ್ನಡದ ಮಹತ್ವ ಅರಿಯುವರು.
	ದೀರ್ಘ ಗದ್ಯ			
1	ಕೃಷ್ಣೇಗೌಡರ ಆನೆ	ಕೆ.ಪಿ ಪೂರ್ಣಚಂದ್ರ ತೇಜಸ್ವಿಯವರ ಈ ಗದ್ಯ ಒಂದು ನೀಳ್ಗತೆ. ಕಥೆಯಲ್ಲಿ ಮೂಕ ಪ್ರಾಣಿಯು ಸಮಾಜದ ವ್ಯವಸ್ಥೆಗೆ	ಚರ್ಚಾ ಪದ್ಧತಿ ಕಥೆ ಹೇಳುವಿಕೆ ಉಪನ್ಯಾಸ ಪದ್ಧತಿ ನಿದರ್ಶನ ಪದ್ಧತಿ ರಸಪ್ರಶ್ನೆ	1.ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳುವರು. ಓದುವ ಕಲೆ ಬೆಳೆಸಿಕೊಳ್ಳುವರು. 2.ಮಾವುತ, ನಾಗರಾಜ, ತಿಪ್ಪಣ್ಣ, ಅಬ್ಬಾಸ, ಕೃಷ್ಣ

		ಬಲಿಯಾಗುವ ಬಗೆಯನ್ನು ಕಟ್ಟಿಕೊಡುವ ರೀತಿ ಮಾವುತ, ನಾಗರಾಜ, ತಿಪ್ಪಣ್ಣ, ಅಬ್ಬಾಸ, ಕೃಷ್ಣ ಅವರ ಪಾತ್ರಗಳಿಗೆ ಲೇಖಕರು ಜೀವ ತುಂಬಿರುವ ಬಗೆ. ಕಥೆಯಲ್ಲಿ ಭ್ರಷ್ಟ ವ್ಯವಸ್ಥೆಯ ಚಿತ್ರಣ ಮೂಡಿ ಬಂದಿರುವ ಬಗೆ		ಅವರ ಪಾತ್ರಗಳ ಮೂಲಕ ವ್ಯಕ್ತಿಗಳ ಸ್ವಭಾವ ತಿಳಿದುಕೊಳ್ಳುವರು. 3.ವಿವಿಧ ಕಾದಂಬರಿಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವರು.

KANNADA CODE NO. 115
CLASS XII
2026 -2027

SUGGESTED ACTIVITIES

ASSESSMENTS FOR LISTENING & SPEAKING SKILLS
LISTENING SKILL

Listening Skill: activity for testing Listening skill be undertaken on stories/famous speakers/Articles/Essays/Audio- or Audio-visual clippings etc. Questionnaire (eitheroral or written)


SPEAKING SKILL

1. Pick & Speak: Pick and speak activity for duration of 2-3 minutes may be administered. Topic may include current affairs.
2. Elocution (Prepared Speech): Student should talk on the given topic.
   Time 2-3 minutes

PROJECT WORK

3.Project can be in the form of neighborhood survey/ Role play performance(individual /group)/ Analysis of an event/Case study/Interview based research/Literature review of a topic etc.

****



ಸಾಹಿತ್ಯ ಸಂಪದ

: ಪರಿವಿಡಿ :

ಪದ್ಯ ಭಾಗ :

೧. [redacted] ೩
೨. ವಚನಗಳು ೧೬
೨.೧ ಬಸವಣ್ಣನವರ ವಚನಗಳು ೧೬
೨.೨ ಉರಿಲಿಂಗಪೆದ್ದಿಯ ವಚನಗಳು ೨೦
೩. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು – ಕುಮಾರವ್ಯಾಸ ೨೩
೪. ಪಗೆಯಂ ಬಾಲಕನೆಂಬುರೇ – ಮಲಿಗೆರೆ ಸೋಮನಾಥ ೩೩
೫. ಜಾಲಿಯ ಮರದಂತೆ – ಪುರಂದರದಾಸರು ೩೯
೬ ಹುಬ್ಬಳಿ ಅವರ ರಸಬಳ್ಳಿ – ಜನಪದ ೪೩
೭ [redacted] ೪೮
೮. [redacted] ೫೩
೯. ಶಿಲುಬೆ ಏರಿದ್ದಾನೆ – ಕೆ.ಎಸ್. ನಿಸಾರ್ ಅಹಮದ್ ೫೮
೧೦. ಒಂದು ಹೂ ಹೆಚ್ಚಿಗೆ ಇಡುತೀನಿ – ಲಲಿತಾ ಸಿದ್ಧಬಸವಯ್ಯ ೬೪
೧೧. [redacted] ೭೦
೧೨. ಒಮ್ಮೆ ನಗುತ್ತೇವೆ – ಸುಕನ್ಯಾ ಮಾರುತಿ ೭೫

ಗದ್ಯ ಭಾಗ :

೧. [redacted] ೮೩
೨. [redacted] ೯೦
೩. ಅಯ್ಕೆಯಿದೆ ನಮ್ಮ ಕೈಯಲ್ಲಿ – ನೇಮಿಚಂದ್ರ ೯೯
೪. ಕನ್ನಡವನ್ನು ಕಟ್ಟುವ ಕೆಲಸ – ಹಾ.ಮಾ. ನಾಯಕ ೧೦೬
೫. ಧಣಿಗಳ ಬೆಳ್ಳಿಲೋಟ – ಎಚ್. ನಾಗಮಣಿ ೧೧೪
೬ ಬದುಕನ್ನು ಪ್ರೀತಿಸಿದ ಸಂತ – ಎಚ್.ಆರ್. ರಾಮಕೃಷ್ಣರಾವ್ ೧೨೪
೭ ತಿರುಳ್ಗನ್ನಡದ ಬೆಳ್ಮುಡಿ – ಮುದ್ದಣ ೧೩೧
೮. [redacted] ೧೩೯

ದೀರ್ಘಗದ್ಯ :

೧. ಕೃಷ್ಣೇಗೌಡನ ಆನೆ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ ೧೪೯

Prescribed Books :

(a) SAHITYA SAMPADA

(b) PALLAVA (Abhyasa Pustaka)

1. **Prescribed Books**

2. Kannada Sahitya Charitre – by R. S. Mugali
3. Kannada Sahityada Itihasa - by R. S. Mugali.
   Pub : Sahitya Akademi, New Delhi.

